# ನಮ್ಮ ಜಟ್ಟಿ



ನಮ್ಮ ಮನೆಯ ಪುಟ್ಟ ನಾಯಿ
ಅದರ ಹೆಸರು ಜಟ್ಟಿ
ತಿನ್ನಲದಕೆ ಬೇಕು ಸದಾ
ಕರುಂ ಕುರುಂ ರೊಟ್ಟಿ

ಜಟ್ಟಿ ಜೊತೆಗೆ ನನ್ನದು
ಆಟ ಬಹಳ ಬಹಳ
ಆಡಿ ಆಡಿ ಕೊನೆಗೆ ತಿನುವೆ
ಅಮ್ಮನಿಂದ ಬೈಗುಳ

ಅಪ್ಪನನ್ನು ಕಂಡ ಒಡನೆ
ಹಾರಿ ನೆಗೆವುದು
ಕೆನ್ನೆ ನೆಕ್ಕಿ ಕೈಯ ಪರಚಿ
ಪ್ರೀತಿ ತೋರುವುದು

ಅಪ್ಪ ಕೂಡ ಜಟ್ಟಿಯನ್ನು
'ಮಗನೇ' ಎನುವರು
ಊಟಕೊಟ್ಟು ಆಟವಾಡಿ
ಮುದ್ದುಗರೆವರು

ಮಳೆಗಾಲದ ಒಂದು ದಿನ
ಪೇಟೆಗೆ ಹೋದರು ಅಪ್ಪ
ಛತ್ರಿಯನ್ನು ಕಟ್ಟೆಮೇಲೆ
ಮರೆತು ಬಿಟ್ಟರು ಪಾಪ

ಶುರು ಆಗೆ ಬಿಡ್ತು ಭಾರಿ ಮಳೆ
ಸ್ವಲ್ಪ ಹೊತ್ತಿಗೆ
ಛತ್ರಿ ನೋಡಿ ಏನೋ ಚಿಂತೆ
ನಮ್ಮ ಜಟ್ಟಿಗೆ

ತಡಮಾಡದೆ ಮಳೆಯಲ್ಲಿಯೆ
ಹೊರಟೆ ಬಿಡ್ತು ಜಟ್ಟಿ
ಅಪ್ಪನನ್ನು ಕರೆದು ತರಲು
ಬಾಯಲ್ಲಿ ಛತ್ರಿಯನು ಕಚ್ಚಿ ಗಟ್ಟಿ

ಅದಕೆ ನಾವು ಹೇಳುವುದು
ಜಟ್ಟಿ 'ನಾಯಿ' ಅಲ್ಲ
ಮನೆಯ ಹಿರಿಯ ಮಗನು
ಅವಗೆ ನಮ್ಮ ಪ್ರೀತಿ ಎಲ್ಲ.

● ಎಂ. ಗೀತಾ

# ನಿಷ್ಠೆ

ಮಹಾ ಮಾತುಗಾರ್ತಿ
ಈ ಮಹಾರಾಯ್ತಿ

ಇಲ್ಲೇ ಇರು, ಬರ್ತೀನಿ ಈಗ
ಅಂತ ತಾಕೀತುಮಾಡಿ
ನಿಲ್ಲಿಸಿ ಹೋಗಿದ್ದಾಳೆ ಹೀಗೆ
ಗೆಳತಿಯ ಮನೆಗೆ

ಈಗ ಅಂದರೆ ಯಾವಾಗ?
ಎಷ್ಟು ಹೊತ್ತು ಕಾಯಲಿ ಹೀಗೆ
ಈ ಅವಸ್ಥೆಯಲ್ಲಿ?

ಕುಳಿತಿದ್ದಾಳಲ್ಲಿ ಪಂಟುಬಡಿಯುತ್ತ
ಬೆಚ್ಚನ್ನ ಮನೆಯೊಳಗೆ
ನಿಲ್ಲಬೇಕು ನಾನಿಲ್ಲಿ ನೆನೆಯುತ್ತ
ನಡುಗುತ್ತ... ಮಳೆಯೊಳಗೆ!

ಯಾವ ಶತ್ರುವಿಗೂ ಬೇಡ
ಇಂಥ ಜೀತ
ಹಾಳಾದ್ದು ನಿಷ್ಠೆ...
ನನ್ನ ಕರ್ಮ!

● ಹ.ಶಿ. ಭೈರನಟ್ಟಿ